**ಓ ಎಸ್ ನಂಃ 241-2021** **ಪಿ ಡಬ್ಲ್ಯೂ - 2**

**ಸಾಕ್ಷಿಯನ್ನು ದಿನಾಂಕಃ 10.01.2024 ರಂದು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀಸವಾಲುಃ** ಪ್ರತಿವಾದಿಗಳ ಪರ ಶ್ರೀ ಎನ್ ಎಸ್ ಯು ವಕೀಲರಿಂದ

ಪಿಅಂಡ ಎಸಸಿ ನಂ.10/2020 ನ್ನು ನಾನು ಮತ್ತು ನನ್ನ ಮಗ ಹೂಡಿದ್ದೆವು. ಸದರಿ ದಾವೆಯನ್ನು ಮಂಜಯ್ಯ ಮತ್ತು ಬಸಯ್ಯ ಹೂಡಿದ್ದರು ಅಂದರೆ ಸರಿಯಲ್ಲ. ಸದರಿ ದಾವೆಯಲ್ಲಿ 2022 ರಲ್ಲಿ ಆದೇಶವಾಗಿದೆ ಅಂದರೆ ಸರಿ. ಮಂಜಯ್ಯ 2021 ರಲ್ಲಿ ಮರಣ ಹೊಂದಿದ್ದಾರೆ ಅಂದರೆ ಸರಿ. ಮಂಜಯ್ಯನ ಮರಣದ ವಿಚಾರವನ್ನು ಸದರಿ ಪ್ರಕರಣದಲ್ಲಿ ವರದಿ ಮಾಡಿಲ್ಲ ಅಂದರೆ ಸರಿಯಲ್ಲ. ನಾನು ಮತ್ತು ನನ್ನ ಹೆಂಡತಿ ಮಂಜಯ್ಯನ ವಾರಸುದಾರರು ಅಂದರೆ ಸರಿ. ಸದರಿ ಪ್ರಕರಣದಲ್ಲಿ ನಾನು ಮತ್ತು ನನ್ನ ಹೆಂಡತಿ ವಾರಸುದಾರರಾಗಿ ರೆಕಾರ್ಡಗೆ ಬಂದಿಲ್ಲ ಅಂದರೆ ಸರಿಯಲ್ಲ. ಮಂಜಯ್ಯನ ಮರಣದ ವಿಚಾರವನ್ನು ಮುಚ್ಚಿಟ್ಟು ಜಿಲ್ಲಾ ನ್ಯಾಯಾಲಯದಿಂದ ಆದೇಶವನ್ನು ಪಡೆದುಕೊಂಡಿದ್ದೇವೆ ಅಂದರೆ ಸರಿಯಲ್ಲ. ಮಂಜಯ್ಯನ ಮರಣದ ವಿಚಾರವನ್ನು ಜಿಲ್ಲಾ ನ್ಯಾಯಾಲಯದಲ್ಲಿ ಗಮನಕ್ಕೆ ತಂದಿದ್ದರೇ ನಮ್ಮ ಪರವಾಗಿ ಆದೇಶವಾಗುತ್ತಿರಲಿಲ್ಲ ಅಂದರೆ ಸರಿಯಲ್ಲ. ಸುಳ್ಳು ಮಾಹಿತಿಯ ಮೇರೆಗೆ ಈ ಆದೇಶವನ್ನು ಪಡೆದುಕೊಂಡಿದ್ದೇವೆ ಅಂದರೆ ಸರಿಯಲ್ಲ.

ಮೃತ್ಯುಪತ್ರವನ್ನು ಬಸಯ್ಯ ಮತ್ತು ಮಂಜಯ್ಯನ ಹೆಸರಿನಲ್ಲಿ ಬರೆದುಕೊಟ್ಟಲಾಗಿತ್ತು. ನನ್ನ ಹೆಸರಿನಲ್ಲಿ ಮೃತ್ಯುಪತ್ರ ಬರೆದಿಲ್ಲ ಅಂದರೆ ಸರಿಯಲ್ಲ. ಚೆನ್ನಬಸವ್ವ ನನ್ನ ಹೆಸರಿಗೆ ಮೃತ್ಯುಪತ್ರವನ್ನು ಬರೆದುಕೊಟ್ಟಿದ್ದಾಳೆಂದು ನನ್ನ ವಾದ ಪತ್ರದಲ್ಲಿ ಸುಳ್ಳು ಬರೆಸಿದ್ದೇನೆ ಅಂದರೆ ಸರಿಯಲ್ಲ. ಪ್ರತಿವಾದಿಗಳು ದಾವಾ ಆಸ್ತಿಯ ಕಬ್ಜೆಯಲ್ಲಿದ್ದಾರೆ ಎಂದರೆ ಸಾಕ್ಷಿಯು ವಾದಿಗಳು ಸಹ ಇದ್ದಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಮೃತ್ಯುಪತ್ರವನ್ನು ನಾವೇ ಸೃಷ್ಟಿ ಮಾಡಿದ್ದೇವೆ ಅಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೆ ಸರಿ ಇದೆ,**

**ದಿವಾಣಿ ನ್ಯಾಯಾಧೀಶರು ಹಾಗೂ**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ.**